Academe-Journal of Education & Psychology ISSN: 2249-040X
Volume-15, Issue-2, Year-2025 (July-December) Peer Reviewed & Refereed Journal (IF: 6.25)
PP: 610-615 Journal Website: www.academejournal.in

# ತೇಜಸ್ವಿ ಅವರ 'ಪರಿಸರದ ಕತೆ'ಯಲ್ಲಿ ವೈಚಾರಿಕ ಪ್ರಜ್ಞೆ

**ಗಣೇಶ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಎಚ್.ಡಿ.ಕೋಟೆ, ಮೈಸೂರು ಜಿಲ್ಲೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಕೃತಿಯ ರಮ್ಯ ಚಿತ್ರಣ, ನಿಸರ್ಗದ ರಮಣೀಯತೆ, ರೌದ್ರತೆಯನ್ನು ರಸಾನುಭೂತಿಯಿಂದ ಕಾವ್ಯ, ಕಾದಂಬರಿಗಳ ಮೂಲಕ ಕುವೆಂಪು ಅವರು ಹೊರ ಹೊಮ್ಮಿಸಿದಂತೆ ಮತ್ತೆ ಯಾರೂ ಚಿತ್ರಿಸಲಿಲ್ಲ. ಜಗತ್ತಿನ ಎಲ್ಲಾ ಸೌಂದರ್ಯವನ್ನು ತನ್ನಂತರಂಗದಲ್ಲಿ ಹುದುಗಿಸಿಕೊಂಡು ಸೊಬಗಿನ ನೆಲೆಬೀಡಾಗಿ ರೂಪುಗೊಂಡಿರುವ ಮಲೆನಾಡಿನ ನಿಸರ್ಗ ತನ್ನ ಎಲ್ಲಾ ರಹಸ್ಯಗಳನ್ನು ಬಿಟ್ಟುಕೊಟ್ಟಿದೆ ಎಂದು ಭಾವಿಸಲಾಗದು. ಮನುಷ್ಯ ಮತ್ತು ಪರಿಸರದ ನಡುವಿನ ಗಾಢವಾದ ಸಂಬಂಧ ಅನಿವಾರ್ಯವಾದುದು. ಪ್ರಕೃತಿ ಸಾನಿಧ್ಯದ ಅನಂತ ಸೌಂದರ್ಯವನ್ನು ಭಾವ ತುಂಬಿ ಕುವೆಂಪು ಅವರು ಬಣ್ಣಿಸಿರುವುದು ಎದ್ದು ಕಾಣುವ ಸಂಗತಿ. ಪಕ್ಷಿ ಲೋಕದ ನಾನಾ ರೀತಿಯ ಸಂಭ್ರಮಗಳು, ಮಲೆನಾಡಿನ ಹಸಿರು ಸಿರಿಯ ಸೊಬಗು, ಗಿರಿ ವನಗಳು, ಹೊಳೆ ನದಿ, ತೊರೆಗಳು ಕುವೆಂಪು ಅವರ ಸಾಹಿತ್ಯದ ವಸ್ತು ವಿಷಯದಲ್ಲಿ ತನ್ಮಯತೆಯಿಂದ ಸಜೀವಗೊಂಡು ಎದುರುಗೊಳ್ಳುತ್ತವೆ. ಕುವೆಂಪು ಮತ್ತು ತೇಜಸ್ವಿಯವರ ಸಾಹಿತ್ಯದಲ್ಲಿ ಒಡಮೂಡಿದ ಪರಿಸರದ ದೃಷ್ಟಿಕೋನಗಳು ಭಿನ್ನ ನೆಲೆಯಲ್ಲಿ ಹರಿದಾಡಿವೆ. ಇಲ್ಲಿ ನಿಸರ್ಗದ ಆರಾಧನೆ ಮತ್ತು ವೈಭವೀಕರಣವನ್ನು ಮೀರಿದ ಮತ್ತೊಂದು ವೈಶಿಷ್ಟ್ಯಪೂರ್ಣವಾದ ಮುಖವನ್ನು ತೇಜಸ್ವಿಯವರು ತೆರೆದಿಡುತ್ತಾರೆ.

ಮಣ್ಣಿನೊಂದಿಗೆ ಬೆಸುಗೆಯನ್ನು ಹೊಂದಿರುವ ಒಕ್ಕಲು ಮಕ್ಕಳ ಮನಸ್ಸು ಎಲ್ಲಿದ್ದರೂ ಮಣ್ಣಿನ ವಾಸನೆಯನ್ನು ಸವಿಯಲು ಹಾತೊರೆಯುತ್ತಿರುತ್ತದೆ. ಬಹುಶಃ ಇಂತಹದೊಂದು ಸೆಳೆತದಿಂದಲೇ ತೋಟ ಮಾಡಿಕೊಂಡು ತಮ್ಮ ಬದುಕಿನ ಅತ್ಯಮೂಲ್ಯ ಕ್ಷಣಗಳನ್ನು ಪರ್ವತಾರಣ್ಯಗಳ ನಡುವೆ ಕಳೆಯುತ್ತಾ, ಕೃಷಿ ಬದುಕಿನಲ್ಲಿ ಶ್ರದ್ಧೆ, ಪ್ರೀತಿ, ಎಲ್ಲವನ್ನು ಕಂಡುಕೊಂಡು, ಪ್ರಾಕೃತಿಕ ಪರಿಸರದ ಹಲವು ಜೀವ ಜಂತುಗಳ ಜೊತೆ ಅತ್ಯಂತ ಪ್ರೀತಿಯ ಒಡನಾಟಗಳನ್ನು ಇಟ್ಟುಕೊಂಡು ಪ್ರಾಕೃತಿಕ ಲೋಕದ ತಪಸ್ವಿಯ ಲೇಖನಿಯಿಂದ ಮೂಡಿ ಬಂದದ್ದೆ 'ಪರಿಸರದ ಕಥೆ'.

ನಿಸರ್ಗದೊಡನೆ ತೇಜಸ್ವಿಯವರು ಹೊಂದಿದ್ದ ಕರುಳಬಳ್ಳಿಯ ನಂಟು ಭಾವಾನುಭವದಿಂದ ಉಕ್ಕಿ ಹರಿದು ಹಲವು ಬರವಣಿಗೆಗಳಿಗೆ ಮೂಲವಾಯಿತು. ತೇಜಸ್ವಿಯವರು ಕೇವಲ ಸೃಜನಶೀಲ ನೆಲೆಯಿಂದ ಪ್ರಕೃತಿಗೆ ಎದುರುಗೊಳ್ಳದೆ, ಮಾನವಶಾಸ್ತ್ರ, ವಿಜ್ಞಾನ, ಮುಂತಾದ ಸಾಹಿತ್ಯೇತರ ಶಿಸ್ತುಗಳ ಮೂಲಕ ಬರವಣಿಗೆಗೆ ಪ್ರವೇಶ ಮಾಡಿದ್ದರ ಪರಿಣಾಮವಾಗಿ ಪರಿಸರ ಕತೆಯಂತಹ ಶ್ರೇಷ್ಠ ಬರವಣಿಗೆ ಆವಿರ್ಭವಿಸಲು ಸಾಧ್ಯವಾಯಿತು.

"ಈಗ ಕಾಡುಗಳಿಲ್ಲದ, ಕಾಡುಪ್ರಾಣಿಗಳಿಲ್ಲದ ಪರಿಸರವು ಸ್ಮಶಾನಕ್ಕಿಂತ ಭೀಕರವಾಗಿ ಕಾಣುತ್ತದೆ. ಕಾಡುಗಳನ್ನೂ, ಕಾಡುಪ್ರಾಣಿಗಳನ್ನೂ ಸಂರಕ್ಷಿಸಬೇಕೆಂದು ನಾನು ಹೇಳಿದರೆ ಅದು ನನ್ನ ತಿಳುವಳಿಕೆಯ ಕಾರಣಗಳಿಗಿಂತಲೂ ಹೆಚ್ಚಾಗಿ ಅವುಗಳೊಂದಿಗೆ ನಾನು ಹೊಂದಿರುವ ವ್ಯಕ್ತಿನಿಷ್ಟ ಸಂಬಂಧವೇ ಆಗಿದೆ. ಕಾಡುಗಳನ್ನು ನಾಶ ಮಾಡಿದಾಗ ಅಲ್ಲಿರುವ ಪ್ರಾಣಿಗಳನ್ನೂ, ಅವುಗಳ ಪರಿಸರವನ್ನೂ ಧ್ವಂಸ ಮಾಡಿದಾಗ ರಹಸ್ಯ, ಗೌಪ್ಯ, ಅದ್ಭುತಗಳ ನಿರಂತರ ನಿಧಿಯೊಂದನ್ನು ನಮ್ಮ ಕಿರಿಯ ಜನಾಂಗ ಕಳೆದುಕೊಂಡತಾಗಿ ಮನಸ್ಸು ಖಿನ್ನವಾಗುತ್ತದೆ."[೧] ಮೇಲಿನ ಮಾತುಗಳು ನಾಗರಿಕ ಸಮಾಜದ ಕಬಂಧ ಬಾಹುಗಳಡಿ ಸಿಲುಕಿ ನಲುಗಿ ಹೋಗುತ್ತಾ ಬರಡಾಗಿರುವ ಪರಿಸರದ ಅಸ್ಥಿಪಂಜರದ ಸ್ಥಿತಿಯನ್ನು ಪ್ರಕಟಪಡಿಸುತ್ತವೆ. ಇಲ್ಲಿ ಕೇವಲ ಸೃಜನಶೀಲ ಮನಸ್ಸು ಮಾತ್ರ ಜಾಗೃತವಾಗಿರದೆ, ಸಮಾಜ ವಿಜ್ಞಾನಿಯ ಸೂಕ್ಷ್ಮ ಸಂವೇದನೆ ತುಡಿತಗಳು ಎದ್ದು ತೋರುತ್ತವೆ.

[೧] ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, ಪುಟ ೨.


**© Copyright @ Authors**

‘ಪರಿಸರದ ಕತೆಯ’ ಒಟ್ಟು ಹದಿನಾಲ್ಕು ಪ್ರಬಂಧಗಳಲ್ಲಿ ಅಡಗಿರುವ ಕಥನ ಗುಣ, ವಸ್ತು ವಿಷಯಗಳು ಸಂವಹನಕ್ಕೆ ಸಂಪರ್ಕ ಸೇತುವೆಯಾಗಿದೆ. ಸಹಜ ಮತ್ತು ಸವೇಗವಾಗಿ ಬೆಳವಣಿಗೆಯಾಗುವ ಶೈಲಿಯಲ್ಲಿ ಕುತೂಹಲವನ್ನು ಕೆರಳಿಸುತ್ತಲೇ ಮಹತ್ವವಾದ ಅಂಶಗಳನ್ನು ಶ್ರುತಪಡಿಸುವ ಚಾತುರ್ಯದಲ್ಲಿ, ಸಾಮಾನ್ಯ ದೃಷ್ಟಿಗೆ ಅಗೋಚರವಾದ ಪ್ರಾಕೃತಿಕ ಪರಿಸರದ, ರಹಸ್ಯ ನಿಗೂಢತೆಗಳು ಸಚಿತ್ರವಾಗಿ ಹೊರ ಹೊಮ್ಮಿವೆ. ಕೃತಿಯ ಆರಂಭದಲ್ಲಿಯೇ ನಿಸರ್ಗದೊಡನೆ ಬೆರತುಹೋಗಬೇಕೆಂಬ ಉತ್ಕಟ ಬಯಕೆಯ ಕಾರಣವನ್ನು ಲೇಖಕರು ಸ್ಪಷ್ಟಪಡಿಸುತ್ತಾರೆ. “ಸುಮ್ಮನೆ ಕೋವಿ ಹೆಗಲಿಗೇರಿಸಿಕೊಂಡು ಕಿವಿ ಜೊತೆ ಕಾಡೊಳಗೆ ಅಲೆಯುತ್ತಾ ಸಾಯಂಕಾಲಕ್ಕೆ ಮೈ ಕೈ ತರಚಿಕೊಂಡು ಮುಳ್ಳು ಚುಚ್ಚಿಸಿಕೊಂಡು ಸುಸ್ತಾಗಿ ಹಿಂದಿರುಗುವುದು ಅರ್ಥ ಮಾಡಿಸಲಾರೆ.”[೨] ಈ ಬಗೆಯ ಸ್ಥಿತ್ಯಂತರಗೊಳ್ಳುವಿಕೆಯಿಂದ ಪ್ರಕೃತಿಯೊಡನೆ ಮಗು ಸಹಜ ಅಪೂರ್ವವಾದ ಕುತೂಹಲದೊಡನೆ ವಿಚಾರವಂತಿಕೆ ಸಂಲಗ್ನಗೊಂಡಿರುವುದರಿಂದ, ಪ್ರಗತಿಪರ ದೃಷ್ಟಿಕೋನ ಕೃತಿಯುದ್ದಕ್ಕೂ ಎದ್ದು ಕಾಣುತ್ತದೆ. ಪದಗಳಲ್ಲಿ ಅಭಿವ್ಯಕ್ತಿಸಲಾಗದ ಭಾವನಾತ್ಮಕ ನೆಲೆಯ ಅತಿಮೋಹ ತನ್ನೆಲ್ಲ ಮಿತಿಗಳನ್ನು ಗೌಣ ಮಾಡಿಕೊಂಡು ‘ಪರಿಸರದ ಕಥೆ’ಯಲ್ಲಿ ನಿಚ್ಚಳವಾಗಿ ಒಡೆದು ಕಾಣುವುದು ವಿಶೇಷವಾಗಿದೆ.

‘ಪರಿಸರದ ಕಥೆಯ’ ಹಲವು ಬರಹಗಳಲ್ಲಿ ಶಿಕಾರಿ, ಪ್ರಾಣಿ ಪಕ್ಷಿಗಳೊಂದಿಗಿನ ಸಂಬಂಧಗಳು, ತೋಟದಲ್ಲಿ ಕೆಲಸ ಮಾಡುತ್ತಿದ್ದ ಆಳು ಕಾಳುಗಳು, ಮನುಷ್ಯ ಸಂಬಂಧಗಳಲ್ಲಿ ಎದುರಾದ ವಿಶಿಷ್ಟ ವ್ಯಕ್ತಿ ಮತ್ತು ಘಟನೆಗಳು, ಅನಕ್ಷರಸ್ಥ ಜನಸಮುದಾಯದ ಮೌಢ್ಯತೆ ಮತ್ತು ಪ್ರಾಮಾಣಿಕತೆ, ಅಸಾಧಾರಣ ಸನ್ನಿವೇಶಗಳಲ್ಲಿ ಅಸಾಧಾರಣವಾಗಿ ವರ್ತಿಸುವ ಕಾಡು ಪ್ರಾಣಿಗಳ ಇರುವಿಕೆಗಳು, ಅರಣ್ಯದಲ್ಲಿ ಅಡಗಿರುವ ಅಪರೂಪದ ಗಿಡಮೂಲಿಕೆಗಳು ಇವೇ ಮೊದಲಾದ ವಿಚಾರಗಳು ಸುರುಳಿ ಸುರುಳಿಯಾಗಿ ಬಿಚ್ಚಿ ಕೊಳ್ಳುತ್ತವೆ. ‘ಕಿವಿ’ ಎಂಬ ನಾಯಿಯೊಡನೆ ಹರಡಿಕೊಂಡಿರುವ ಬೇಟೆಯ ಅನುಭವಗಳು ರೋಮಾಂಚನ ಕಾರಿಯಾಗಿ ಚಿತ್ರಿತಗೊಂಡಿವೆ. ಯಾವುದೇ ಒಂದು ಪ್ರಾಣಿಯ ಬಗ್ಗೆ ಬರೆಯುವಾಗ ಕೇವಲ ಘಟನೆಗಳನ್ನು ಮಾತ್ರ ಚಿತ್ರಿಸದೆ, ಆ ಪ್ರಾಣಿಗೆ ಸಂಬಂಧಿಸಿದ ಪೂರಕ ಮಾಹಿತಿಗಳನ್ನು ಹೇಳುವುದರಿಂದ ಇಲ್ಲಿನ ಪ್ರಬಂಧಗಳಿಗೆ ಪರಿಪೂರ್ಣತೆ ಪ್ರಾಪ್ತವಾಗುತ್ತದೆ.

‘ಮಾನೀಟರ್’ ಹಾಗೂ ಸುಸ್ಮಿತ ಮತ್ತು ಹಕ್ಕಿಮರಿ’ ಬರಹದಲ್ಲಿ ಉಡ ಮತ್ತು ಹಲವು ಕಾಡು ಹಕ್ಕಿಗಳ ವರ್ತನೆಗಳು, ಆಹಾರಕ್ರಮ ಮುಂತಾದ ಅಂಶಗಳು ವ್ಯಕ್ತಗೊಂಡಿವೆ. ಇಂತಹ ಕಾರಣಗಳಿಂದ ಸಹೃದಯರು ಕಾಡಿನ ಪ್ರಾಣಿ, ಪಕ್ಷಿ ಸಮೂಹದೊಡನೆ ಆತ್ಮೀಯ ಸಂಬಂಧಗಳನ್ನು ಬೆಸೆದುಕೊಳ್ಳಲು ಸಾಧ್ಯವಾಗುತ್ತದೆ. “ಕರ್ವಾಲೋ ‘ಕಾದಂಬರಿಗೂ’ ಪರಿಸರದ ಕತೆಗೂ ಇರುವ ಸಾದೃಶ್ಯ ಬೆರಗು ಹುಟ್ಟಿಸುವಂತಿದೆ. ಅಷ್ಟೇ ಅಲ್ಲ ಈ ಕೃತಿಯ ಸಾಹಿತ್ಯಕ ಗುಣ ಎಂಥದ್ದೆಂದರೆ ‘ಪರಿಸರದ ಕತೆಯನ್ನು ಒಂದು ಕಥಾ ಸಂಕಲನವಾಗಿ, ಸಡಿಲ ಬಂಧದ ಕಾದಂಬರಿಯಾಗಿ ಓದಿ ಆನಂದಿಸಬಹುದು. ‘ಕರ್ವಾಲೋ’ದಂಥ ಕಾದಂಬರಿಯನ್ನು ನಮ್ಮ ಸಂದರ್ಭದಲ್ಲಿ ತೇಜಸ್ವಿಯಂಥವರು ಮಾತ್ರ ಬರೆಯಬಲ್ಲರು ಎಂಬುದಕ್ಕೆ ಪರಿಸರದ ಕಥೆಯಲ್ಲಿ ಅನೇಕ ಸೂಚನೆಗಳು ಸಿಗುತ್ತವೆ”[೩] ಎಂಬುದು ಸತ್ಯ ಸಂಗತಿ. ‘ಪರಿಸರದ ಕತೆಯನ್ನು ಸೂಕ್ಷ್ಮನೆಲೆಯಿಂದ ಗ್ರಹಿಸಿದಾಗ ತೇಜಸ್ವಿಯವರ ಸಾಹಿತ್ಯ ಸೃಷ್ಠಿಯ ಹಿಂದಿನ ಪ್ರಭಾವ ಪ್ರೇರಣೆಗಳು, ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಪರಿಸರಗಳ ಸ್ವರೂಪ ತಿಳಿಯುತ್ತದೆ. ಅಲ್ಲದೆ ಅವರ ಸಮಗ್ರ ಸಾಹಿತ್ಯದ ವಸ್ತುನಿಷ್ಠ ಗ್ರಹಿಕೆಗೆ ಈ ಮಾದರಿಯ ಅಧ್ಯಯನ ಸಹಕಾರಿಯಾಗುತ್ತದೆ.

‘ಪರಿಸರದ ಕತೆ’ಯಲ್ಲಿ ಕಂಡು ಬರುವ ಮಾರ, ಮಾಸ್ತಿ, ಭೈರ, ಪ್ಯಾರ ಮುಂತಾದ ಅನಕ್ಷರಸ್ಥ ಲೋಕದ ಪ್ರತಿನಿಧಿಗಳು ಮಂಡಿಸುವ ವಾದ ವಿವಾದಗಳು, ವಿಚಿತ್ರ ಚರ್ಚೆಗಳನ್ನು ಲೇಖಕರು ಒಮ್ಮೆಲೆ ನಿರಾಕರಿಸಿಬಿಡುವುದಿಲ್ಲ. ಅವುಗಳ ಸತ್ಯಾಸತ್ಯತೆಗಳನ್ನು ಪರಿಶೀಲಿಸಿ ವೈಜ್ಞಾನಿಕ ನೆಲೆಯಿಂದ ವಿಶ್ಲೇಷಣೆ ಮಾಡುವುದು ಮುಖ್ಯವಾಗಿ ತೋರುತ್ತದೆ. ಒರಟಾದ ಹಾಗೆ ಕಾಣುವ ಭೈರನ ಹೃದಯದಲ್ಲಿ ಅಡಗಿರುವ

[೨] ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, ಪುಟ ೪.
[೩] ಟಿ.ಪಿ ಅಶೋಕ, ತೇಜಸ್ವಿ ಕಥನ, ಪುಟ ೧೦೬


© Copyright @ Authors

ನೈತಿಕ ಮೌಲ್ಯಗಳನ್ನು ಗುರುತಿಸಲು ಲೇಖಕರು ಮರೆಯುವುದಿಲ್ಲ. ಶಿಕಾರಿಗೆ ಇಟ್ಟಿದ್ದ ಮದ್ದಿನ ಉಂಡೆಯನ್ನು ತಿಂದು ಬೈರನ ನಾಯಿ ಸತ್ತ ಮೇಲೆ ಹಿಂದಿರುಗುವ ದಾರಿಯಲ್ಲಿ ಭೈರನ ಮಾನಸಿಕ ದುಗುಡ ಚಿತ್ರತಗೊಂಡಿರುವುದು ಹೀಗೆ. "ನಸುಗತ್ತಲಲ್ಲಿ ಅವನ ಕಣ್ಣುಗಳಲ್ಲಿ ನೀರು ತುಂಬಿದಂತೆ ಕಂಡಿತು. ಅದೇನು ರಾಮ ಸತ್ತಿದ್ದಕ್ಕೆ ನಿಜಕ್ಕೂ ಸಂತಾಪ ಪಡಲು ಮೂರು ದಿನ ಸೂತಕ ಆಚರಿಸುತ್ತಿದ್ದಾನೋ ಅಥವಾ ಕೆಲಸಕ್ಕೆ ತಪ್ಪಿಸಿಕೊಳ್ಳಲು ನೆವ ಹೇಳುತ್ತಿದ್ದಾನೋ! ಇದ್ದ ಒಂದು ಉಂಡೆ ಹಾಳಾದುದಕ್ಕೆ ದುಃಖ ಪಡುತ್ತಿದ್ದಾನೋ ಅಥವಾ ರಾಮ ಸತ್ತಿದ್ದಕ್ಕೆ ನಿಜಕ್ಕೂ ಅವನಿಗೆ ದುಃಖವಾಗಿತ್ತೋ? ಯಾರಿಗೆ ಗೊತ್ತು? ಆದುದರ ಆಧಾರದ ಮೇಲೆ ಆಲೋಚಿಸಿದರೆ, ಹೇಗೆ ಯೋಚಿಸಿದರೂ ಅದೇ ಸರಿ ಎನ್ನುವಂತೆ ಕಾಣುತ್ತದೆ."[೪] "ಸೂಕ್ಷ್ಮಸಂವೇದನೆಯಿಂದ ಕೂಡಿರುವ ಸಾಮಾಜಿಕ ಎಚ್ಚರ ಸದಾ ಜಾಗೃತಿಗೊಂಡಿರುವುದನ್ನು ಇಂತಹ ಕಡೆಗಳಲ್ಲೆಲ್ಲ ಗುರುತಿಸಿಕೊಳ್ಳಬಹುದು.

ಪ್ರಕೃತಿಯ ಮತ್ತು ಶ್ರೀ ಸಾಮಾನ್ಯನ ಬದುಕಿನ ಹಿಂದಿರುವ ವಸ್ತುನಿಷ್ಠ ಮತ್ತು ವೈಜ್ಞಾನಿಕ ವಿಶ್ಲೇಷಣೆ 'ಪರಿಸರದ ಕತೆ'ಯ ಹಿಂದಿರುವ ಪ್ರಮುಖ ಧೋರಣೆಯಾಗಿದೆ. ನಿಸರ್ಗ ಮತ್ತು ಅಲ್ಲಿನ ಹಲವು ಜೀವಜಾಲದೊಡನೆ ಬೆರೆತ ನಂಟಿನ ಅಪಾರ ಅನುಭವ ಸಂಪತ್ತನ್ನು ಅತ್ಯಂತ ಎಚ್ಚರಿಕೆಯಿಂದ ಪರಿಶೀಲಿಸುವ ಗಂಭೀರ ಪ್ರಕ್ರಿಯೆಗಳು ಕೃತಿಯುದ್ದಕ್ಕೂ ಕಾಣಿಸಿಕೊಳ್ಳುತ್ತವೆ. ಸರಳ ಮತ್ತು ಸಾಮಾನ್ಯ ಎನ್ನಬಹುದಾದ ಅನುಭವಗಳು ತೇಜಸ್ವಿಯವರ ಬರವಣಿಗೆ ಶೈಲಿ ವಿನ್ಯಾಸದಿಂದ ವಿಶಿಷ್ಟ ದರ್ಶನವೊಂದನ್ನು ಹೊರಡಿಸುತ್ತದೆ. 'ಸಾಮಾಜಿಕ ಪ್ರಜ್ಞೆ' ಎಂಬ ಅಂಶ ಅಪ್ರಜ್ಞಾಪೂರ್ವಕವಾಗಿ ಹರಿದಾಡುವುದರಿಂದ, ಇಲ್ಲಿನ ಪ್ರಬಂಧಗಳು ಭಿನ್ನ ವಿನ್ಯಾಸವನ್ನು ಪಡೆದುಕೊಂಡಿವೆ. ಪರಿಸರದ ಹಲವು ಸನ್ನಿವೇಶಗಳ ಹಸಿ ಹಸಿಯಾದ ಮತ್ತು ಜೀವಂತ ಚಿತ್ರಣಗಳಲ್ಲಿ ಸಾಮಾಜಿಕ ಅನನ್ಯತೆ ಸಾಧಿತವಾಗಿದೆ. ಬಾಳಿನ ಸೂಕ್ಷ್ಮತೆ, ಸರಳತೆ, ಸಂಕೀರ್ಣತೆಗಳನ್ನು ಆಪ್ತತೆಯಿಂದ ಅಭಿವ್ಯಕ್ತಗೊಳಿಸುವ ತೇಜಸ್ವಿಯವರು ನಿಸರ್ಗದಲ್ಲಿ ಎಲ್ಲವನ್ನು ಶೋಧಿಸುವ ನೆಲೆ ಮುಖ್ಯವಾದುದು. "ಪ್ರಕೃತಿ ಮತ್ತು ಪರಿಸರದ ನಡುವಿನ ಭೌತಿಕ ಸಂಬಂಧದ ಶೋಧನೆಗೆ ತೇಜಸ್ವಿ ಅವರು ತಮ್ಮ 'ಪರಿಸರದ ಕಥೆಗಳಲ್ಲಿ ತೊಡಗುವುದನ್ನು ಕಾಣುತ್ತೇವೆ. ಪ್ರಕೃತಿ ಮತ್ತು ಪರಿಸರದ ಬಗ್ಗೆ ಗಾಢವಾದ ಕುತೂಹಲ, ವಿಸ್ಮಯ ಭಯವನ್ನು ಪ್ರಕಟಿಸುವುದನ್ನು ನೋಡುತ್ತೇವೆ. ಜೀವ ವಿಕಾಸದ ರೀತಿಯನ್ನು ವೈಜ್ಞಾನಿಕವಾಗಿ, ಕಲಾತ್ಮಕವಾಗಿ ಕಥೆಗಳ ಮೂಲಕ ವಿವರಿಸುವುದು ತೇಜಸ್ವಿಯವರ ಕಾಳಜಿಯಾಗಿದೆ. ಈ ದೃಷ್ಟಿಯಿಂದ ಅವರ 'ಭೈರ ಮತ್ತು ಮಾಸ್ತಿ', 'ಸುಸ್ಮಿತ ಮತ್ತು ಹಕ್ಕಿ ಮರಿ', 'ಕಿವಿಯೊಡನೆ ಒಂದು ದಿನ' ಇವು ಗಮನಾರ್ಹವಾದ ಪರಿಸರದ ಕಥೆಗಳಾಗಿವೆ. ಜೀವನ ಮೌಲ್ಯಗಳ ಬಗ್ಗೆ ತೇಜಸ್ವಿಯವರಿಗೆ ಇರುವ ಕಾಳಜಿ ವಿಶೇಷವಾದುದು. ಅವರ ಕಥೆಗಳಲ್ಲಿ ಬದುಕಿನ ದುರಂತ ಮತ್ತು ಹಾಸ್ಯ ಎರಡೂ ಯಮಳ ಪ್ರಶ್ನೆಗಳಾಗಿವೆ. ಕರುಣೆ ಮತ್ತು ಹಾಸ್ಯಗಳೆರಡನ್ನೂ ಸಮಾನವಾಗಿ ವ್ಯಂಜಿಸಬಲ್ಲ ಭಾಷೆಯ ಹದ ತೇಜಸ್ವಿಯವರ ಪ್ರತಿಭೆಯ ವಿಸ್ಮಯವಾಗಿದೆ."[೫]

ಡಾ. ಕರೀಗೌಡ ಬೀಚನಹಳ್ಳಿಯವರು ಗುರುತಿಸುವ ಅಂಶಗಳ ಜೊತೆಗೆ ವರ್ತಮಾನದಲ್ಲಿ ಘಟಿಸಿದ ಸಂಗತಿಗಳೇ ಕಥಾ ಸ್ವರೂಪವನ್ನು ಪಡೆದುಕೊಂಡಿರುವುದು ಇಲ್ಲಿನ ವಿಶೇಷ. ಮಾನವನ ದುರಾಸೆಗೆ ಪ್ರಕೃತಿ ಬಲಿಯಾಗುತ್ತಿರುವುದರಿಂದ ಜೀವಿಗಳ ಅಧಃಪತನಕ್ಕೆ ನಾಂದಿಯಾಗುವ ಮುನ್ಸೂಚನೆಗಳು ಅಲ್ಲಲ್ಲಿ ಸಿಗುತ್ತವೆ. ಅನುಭವದ ಕುಲುಮೆಯಲ್ಲಿ ಬೆಂದು ಪರಿಪಾಕಗೊಂಡ ಸಾಮಾಜಿಕ ಘಟನೆಗಳು 'ಪರಿಸರದ ಕತೆ'ಯಲ್ಲಿ ಅಪೂರ್ವವಾಗಿ ಹರಿದಿರುವ ಪರಿ ಬೆರಗು ಹುಟ್ಟಿಸುತ್ತದೆ. ಪ್ರತಿಯೊಂದು ಸಂದರ್ಭಗಳ ವಸ್ತುನಿಷ್ಠ ಹಾಗೂ ಜೀವಂತ ಚಿತ್ರಣಗಳು ಸಹೃದಯರಲ್ಲಿ ಗಾಢವಾದ ಸಂವೇದನೆಗೆ ಪ್ರೇರೇಪಿಸುವುದರಿಂದ ಇಲ್ಲಿನ ಪ್ರಬಂಧಗಳು ಹೆಚ್ಚು ಜನಪ್ರಿಯವಾಗಿವೆ. ವಾಸ್ತವಿಕತೆ, ಪ್ರಾಮಾಣಿಕ ಅಭಿವ್ಯಕ್ತಿ, ವೈಜ್ಞಾನಿಕ ಜಿಜ್ಞಾಸೆ, ತರ್ಕಬದ್ಧವಾದ ತೀರ್ಮಾನ, ಕಂಡುಂಡ ಅನುಭವಗಳ ಸತ್ಯಾಸತ್ಯತೆಯನ್ನು ಒರೆ ಹಚ್ಚಿ ನೋಡುವುದು, ಸರಳ ಮತ್ತು ವೈನೋದಿಕವಾದ ಶೈಲಿ, ಇವೇ ಮೊದಲಾದವುಗಳು

[೪] ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ. ಪುಟ ೩೬

[೫] ಡಾ. ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣ ಕಥೆಗಳ ಸಮೀಕ್ಷೆ. ಪುಟ ೧೦೬


© Copyright @ Authors

Academe-Journal of Education & Psychology ISSN: 2249-040X
Volume-15, Issue-2, Year-2025 (July-December) Peer Reviewed & Refereed Journal (IF: 6.25)
PP: 610-615 Journal Website: www.academejournal.in

ತೇಜಸ್ವಿಯವರ ಪ್ರಬಂಧಗಳ ಸ್ಥಾಯಿ ಗುಣವಾಗಿವೆ. ಪ್ರಕೃತಿಪ್ರಿಯತೆಯ ದೃಷ್ಟಿಕೋನ ಎದುರಾದರೂ, ಅದು ಗೌಣಗೊಂಡು ಪ್ರಕೃತಿಯ ನಿಗೂಢತೆಯನ್ನು ಅರಿಯುವಲ್ಲಿ 'ಪರಿಸರದ ಕತೆ' ಅನಾವರಣಗೊಂಡಿದೆ. ಮಲೆನಾಡಿನ ವಿಶಾಲ ಜನ ಸಮುದಾಯದ ಸಾಂಸ್ಕೃತಿ, ಆರ್ಥಿಕ, ಸಾಮಾಜಿಕ, ಆಯಾಮಗಳನ್ನು ಕಲಾತ್ಮಕವಾಗಿ ಹಿಡಿದಿಡುವಲ್ಲಿ, ಹಲವು ವಿಸ್ಮಯಗಳ ಅನ್ವೇಷಣೆಯಲ್ಲಿ ಯೂ ನವಿರಾದ ಹಾಸ್ಯ ಪ್ರಜ್ಞೆ ಎದುರಾಗುವುದರಿಂದ ತೇಜಸ್ವಿಯವರ ಬರವಣಿಗೆ ಎಲ್ಲಾ ವರ್ಗದ ಓದುಗರನ್ನು ಮುಟ್ಟಲು ಸಾಧ್ಯವಾಗಿದೆ.

ಸ್ವಾತಂತ್ರ್ಯೋತ್ತರ ಸಾಂಸ್ಕೃತಿಕ ಸ್ಥಿತ್ಯಂತರಗಳಿಗೆ ಮೈಯೆಲ್ಲಾ ಕಣ್ಣಾಗಿ ಗ್ರಹಿಸಿ ತಮ್ಮ ಸಾಹಿತ್ಯದ ಮೂಲಕ ಗಂಭೀರ ಪ್ರತಿಕ್ರಿಯೆ ವ್ಯಕ್ತಪಡಿಸಿದ ತೇಜಸ್ವಿಯವರು, ಬದುಕಿದಂತೆ ಬರೆದವರು. ಬರೆದಂತೆ ನಡೆದುಕೊಂಡವರು. ಆದ್ದರಿಂದ ಅವರ ಕೃತಿಗಳ ಒಡಲಲ್ಲಿರುವ ಪ್ರಾಕೃತಿಕ ಪ್ರಪಂಚವನ್ನು ಏಕಾತ್ಮಕ ಗ್ರಹಿಕೆಯಿಂದ ನೋಡುವುದು ಉಚಿತವಾದುದಲ್ಲ. ವಿಸ್ಮಯ ಪರಿಸರದ ಪ್ರಪಂಚಕ್ಕೆ ಹಲವು ವೈಜ್ಞಾನಿಕ ಸತ್ಯಗಳಿರುವುದರಿಂದ ವಿಭಿನ್ನ ನೆಲೆಯಲ್ಲಿ ಕೃತಿಯಲ್ಲಿ ಪ್ರವೇಶಿಸಿದಾಗ, ಕಾಲಮಾನದ ಸಾಂಸ್ಕೃತಿಕ ಸಂಘರ್ಷಗಳ ಹೊಯ್ದಾಟ ಎದುರಾಗುತ್ತದೆ.

ಕ್ರೋಧ, ಸಾತ್ವಿಕ ನೆಲೆಯಲ್ಲಿ ಹೊರ ಹೊಮ್ಮುವುದು ಸಹಜ. ಆದ್ದರಿಂದ ಯಾಂತ್ರಿಕತೆ ಮತ್ತು ಸೀಮಿತ ಚೌಕಟ್ಟಿನ ಪೊರೆ ಕಳಚಿ ಸಾಂಸ್ಕೃತಿಕ ಪರಿಸರವನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ. ಆದ್ದರಿಂದ "ಪರಿಸರ ಅಂದಾಕ್ಷಣ ಕೇವಲ ಗಿಡ-ಮರ, ಪ್ರಾಣಿ-ಪಕ್ಷಿಗಳಷ್ಟೇ ಅಲ್ಲ; ಇಲ್ಲಿ ಸಾಮಾಜಿಕ ಪರಿಸರವಿದೆ. ಒಂದು ನೈಸರ್ಗಿಕ ಪರಿಸರವಿದೆ. ಬೌದ್ಧಿಕವಾದ ಪರಿಸರವೂ ಇದೆ. ಈ ಕಾರಣದಿಂದ ತೇಜಸ್ವಿ ಅವರ ಸಾಹಿತ್ಯದ ಕೇಂದ್ರ ಪ್ರಜ್ಞೆ ಈ ಪರಿಸರ. ಪರಿಸರವನ್ನು ಕೇವಲ relative term ಆಗಿ ಇಟ್ಟುಕೊಳ್ಳಬೇಕು. ಪರಿಸರವೆಂದರೆ ಕೇವಲ ಪರಿಸರವಾದಿ ಚಳುವಳಿ, ಮರ-ಗಿಡ, ಬೆಟ್ಟ-ಗುಡ್ಡ, ಪ್ರಾಣಿ-ಪಕ್ಷಿ, ಅಷ್ಟೇ ಅಲ್ಲ, ಅದರೊಟ್ಟಿಗೆ ಇರುವ ಅಖಂಡವಾದ ಈ ಜಗತ್ತು. ಅದರೊಳಗಿರುವ ಮನುಷ್ಯರು, ಅವರ ಆಲೋಚನಾ ಕ್ರಮಗಳು ಮಾಡುವ ರಾಜಕಾರಣ, ಅಲ್ಲಿರುವ ಗುಡ್ಡಗಳು, ಬೆಟ್ಟಗಳು, ನದಿಗಳು, ನಾವು ಮಾಡುವ ರಾಜಕಾರಣದಿಂದ ಅವುಗಳ ಮೇಲಾಗುವ ಪರಿಣಾಮ ಈ ಎಲ್ಲವನ್ನೂ ಪ್ರಚೋದಿಸುವುದು, ಅವರ ಮನಸ್ಸಿನೊಳಗೆ ಅಂತರ್ಗತವಾಗಿರುವುದು ಆ ಪರಿಸರದ ವಿಸ್ಮಯ"[೬] ಪ್ರತಿಯೊಬ್ಬ ಮಾನವನು ಸಾಮಾಜಿಕ ಹಂದರದ ಅವಿಭಾಜ್ಯ ಅಂಗವಾಗಿರುವುದರಿಂದ ಸಮಷ್ಟಿ ಪ್ರಜ್ಞೆಯಿಂದ ರೂಪವುಗೊಂಡ ಸಾಂಸ್ಕೃತಿಕ ಅಖಂಡತೆಗಳನ್ನು ಸಮೂಹದೊಳಗೆ ಹುಡುಕಾಡಿ ಬಿಡುಗಡೆಯ ಹಾದಿಗೆ ಮುಂದಾಗಬೇಕಾಗುತ್ತದೆ. ಆದ್ದರಿಂದ ತೇಜಸ್ವಿಯವರ ಪ್ರಾಕೃತಿಕ ಕಲಾ ಸೃಷ್ಟಿ ರಸ ಸಮುದ್ರದಲ್ಲಿ ತೇಲುವುದಕ್ಕೆ ಮಾತ್ರ ಸೀಮಿತವಾಗಿರದೆ, ಸಾಂಸ್ಕೃತಿಕ ಅವನತಿಯನ್ನು ಪ್ರತಿಧ್ವನಿಸುವುದು ಗಮನಾರ್ಹ.

ಕುವೆಂಪು ಮತ್ತು ತೇಜಸ್ವಿಯವರು ಪ್ರಾಕೃತಿಕ ನೆಲೆಗಳನ್ನು ಎದುರುಗೊಳ್ಳುವ ದೃಷ್ಟಿಕೋನ ವಿಭಿನ್ನವಾದುದು. ನೈಸರ್ಗಿಕ ಅನುಭವ ಮೊತ್ತವನ್ನು ಸಾಹಿತ್ಯ ಕೃತಿಗಳ ಉಸಿರಿನಂತೆ ಕುವೆಂಪು ಅವರು. ಅಭಿವ್ಯಕ್ತಿಸುತ್ತಾರೆ. ಅವರ ಕಾದಂಬರಿ, ಕಾವ್ಯ. ಮಹಾಕಾವ್ಯ ಇವೆ ಮೊದಲಾದವುಗಳಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿಗಳು, ವಿಶಾಲವಾದ ನೀಲಿ ಗಗನ, ಅನಂತ ಅರಣ್ಯರಾಶಿ, ಸಹಸ್ರ ಪಕ್ಷಿಗಳ ಸುಮಧುರ ಗಾನ, ಭೂಮ್ಯಾಕಾಶಗಳ ದಿಗಂತ ಪಂಕ್ತಿಯ ರೇಖೆ, ವೈವಿಧ್ಯಮಯ ಮತ್ತು ವರ್ಣನಾಮಯ ಹಸಿರು ಸಿರಿ, ಇವೇ ಮೊದಲಾದ ಪ್ರಕೃತಿಯ ಭವ್ಯ ಚಿತ್ರಣ ಭಾವಾವೇಗದಿಂದ ಹೊರ ಹೊಮ್ಮುತ್ತದೆ. ಹೀಗೆ ಕುವೆಂಪು ಅವರ ಸಮಗ್ರ ಸಾಹಿತ್ಯದಲ್ಲಿ ಪರಿಸರದ ಚಿತ್ರಣ ಒಂದಕ್ಕೊಂದು ಪೂರಕವಾಗಿ ಬೆರೆತು ಹೋಗಿರುವುದರಿಂದ ಇವುಗಳ ಬೇರ್ಪಡಿಕೆ ಸಾಧ್ಯವಿಲ್ಲ. ಆದರೆ ತೇಜಸ್ವಿಯವರು ಪ್ರಕೃತಿಗೆ ಮುಖಾಮುಖಿಗೊಳ್ಳುವುದೇ ಭಿನ್ನ ನೆಲೆಯಿಂದ ಎಂಬುದು ಗಮನಾರ್ಹವಾದುದು. " ಕುವೆಂಪು ಅವರ ಬರವಣಿಗೆ ಸಮೃದ್ಧಗೊಳ್ಳುವುದು ಪ್ರಕೃತಿಯ ಜೀವಂತ ವಿವರಣೆಗಳಿಂದ. ಕುವೆಂಪು ಅವರಿಗೆ ಕಾಜಾಣದ ಸೌಂದರ್ಯ ಮತ್ತು ಅದರ ಧ್ವನಿ ಭಾವನಾತ್ಮಕವಾಗಿ ಮುಖ್ಯವೆನಿಸಿದರೆ, ತೇಜಸ್ವಿಯವರಿಗೆ ಕಾಜಾಣದ ಬದುಕಿನ ವಿವರಗಳು, ಅದರ ಸ್ವರೂಪದ ವಿವರಣೆಗಳಲ್ಲಿ ಹೆಚ್ಚು ಆಸಕ್ತಿ. ಅಷ್ಟರ ಮಟ್ಟಿಗೆ ಕುವೆಂಪು ಅವರ

[೬] ಕೆ. ರಾಮದಾಸ್, ತೇಜಸ್ವಿ-ಸಾಹಿತ್ಯ ಕೃಷಿ, ಪ್ರೊ. ಜಿ.ಟಿ. ವೀರಪ್ಪ, ಡಾ.ಎಂ.ಬೈರೇಗೌಡ(ಸಂ), ಪುಟ ೮೩


© Copyright @ Authors

ಪ್ರಕೃತಿ ಪ್ರಿಯತೆಯ ಮುಂದುವರಿದ ಭಾಗವಾಗಿ ತೇಜಸ್ವಿಯವರ ಪ್ರಾಕೃತಿಕ ವಿಜ್ಞಾನದ ಬರವಣಿಗೆಗಳಿವೆ."[೭] ಕುವೆಂಪು ಅವರು ಪರಿಸರದ ರಮ್ಯ ಸೊಬಗಿಗೆ ಮಾರು ಹೋಗಿ, ಸೃಷ್ಟಿಯ ರಚನೆಯ ಸೊಬಗಿನಿಂದ ರೋಮಾಂಚನಗೊಂಡು, ರಸಯಾತ್ರೆಯಲ್ಲಿ ಪಾಲ್ಗೊಳ್ಳುವ ಮನಸ್ಸು, ಎಲ್ಲೋ ಒಂದು ಕಡೆ ಆಧ್ಯಾತ್ಮಿಕ ಪರಿವೇಷದ ನೆಲೆಯ ಅತೀತದೆಡೆಗೆ ಹೊರಳುತ್ತದೆ. ಆಕಾಶದಲ್ಲಿ ಸಾಲು ಸಾಲಾಗಿ ಹಾರಾಡುವ ಬೆಳ್ಳಕ್ಕಿಗಳ ಹಿಂಡು ದೇವರು ರುಜು ಮಾಡಿದಂತೆ ಕಾಣುತ್ತದೆ. ಆದರೆ ತೇಜಸ್ವಿಯವರು ಇಂತಹ ಸಂಕೀರ್ಣತೆಯನ್ನು ಸಮರ್ಥವಾಗಿ ಎದುರಿಸಿ ಸೂಕ್ಷ್ಮತೆಯ ನೆಲೆಯಿಂದ ದ್ವಂದ್ವವಿಲ್ಲದೆ ವೈಚಾರಿಕ ದಾರಿಯಲ್ಲಿ ಸಾಗುವುದು ಮುಖ್ಯವಾಗುತ್ತದೆ. ಪರಿಸರದ ನಿಗೂಢತೆ, ನಿರಂತರತೆ, ಸೌಂದರ್ಯ, ಮುಂತಾದ ಅನಂತ ಮುಖಗಳ ವಿರಾಟ್ ಸ್ವರೂಪವನ್ನು ಕುವೆಂಪು ಮತ್ತು ಕಾರಂತರಿಗಿಂತ ಭಿನ್ನವಾಗಿ ತೆರೆದು ತೋರಿದ್ದು ತೇಜಸ್ವಿಯವರ ಪರಿಸರ ಪ್ರಜ್ಞೆಯ ಪರ್ಯಾಯ ಕಾಣ್ಕೆ.

"ಪರಿಸರದ ಕತೆ'ಯಲ್ಲಿ ಮರಗಿಡ, ಪಶು ಪಕ್ಷಿಗಳ ಜಗತ್ತಿನಂತೆ ಇಂದು ಮನುಷ್ಯ ಪರಿಸರವೂ ತೇಜಸ್ವಿ ಅವರ ಮಾನಸಿಕ ಲೋಕದ ಒಳ ಪರಿಸರವೂ ಏಕ ಕಾಲದಲ್ಲಿ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಇದರಿಂದಾಗಿ ಬರವಣಿಗೆಗೆ ವಿಶೇಷವಾದ ಲವಲವಿಕೆ, ಜೀವಂತಿಕೆ ಬಂದು ಬಿಟ್ಟಿದೆ. ತೇಜಸ್ವಿಯವರ ಕಾಮಿಕ್ ಧಾಟಿ ಇಡೀ ಪುಸ್ತಕವನ್ನು ಹೊಚ್ಚ ಹೊಸದಾಗಿ ಇಟ್ಟಿದೆ. ಒಂದು ಪುಟವೂ ಬೇಸರ ಹುಟ್ಟಿಸುವುದಿಲ್ಲ. ವಿನೋದ ತೇಜಸ್ವಿಯವರ ಬರವಣಿಗೆಯಲ್ಲಿ ಕೇವಲ ಒಂದು ತಾಂತ್ರಿಕ ಉಪಕರಣವಲ್ಲ. ಅದು ಅವರು ಅನುಭವವನ್ನು ಗ್ರಹಿಸುವ ಮತ್ತು ಅಭಿವ್ಯಕ್ತಿಸುವ ತಾತ್ವಿಕತೆಗೇ ಸಂಬಂಧಿಸಿದ್ದು, ವೈನೋದಿಕ ದರ್ಶನ ಎಂಬ ಪರಿಕಲ್ಪನೆಯನ್ನು ಸಮಕಾಲೀನ ಕನ್ನಡ ಲೇಖಕರ ಸಂದರ್ಭದಲ್ಲಿ ಉಪಯೋಗಿಸ ಬಹುದಾದಲ್ಲಿ ತೇಜಸ್ವಿಯವರಿಗಿಂತ ಒಳ್ಳೆಯ ಉದಾಹರಣೆ ಸಿಗುವುದು ಕಷ್ಟವೇ"[೮] ಎಂಬ ಟಿ.ಪಿ. ಅಶೋಕ ಅವರ ಮಾತುಗಳ ಗಮನಾರ್ಹವಾದುದು. 'ಮೂಲಿಕೆ ಬಳ್ಳಿಯ ಸುತ್ತ' ಎಂಬ ಪ್ರಬಂಧದಲ್ಲಿ ಹರಡಿಕೊಂಡಿರುವ ಗಿಡ ಮೂಲಿಕೆಗಳ ಸಂಬಂಧಿ ಅಂಶಗಳು ಮುಖ್ಯವಾಗುತ್ತವೆ. ಭಾರತದ ವಿಶಾಲವಾದ ಅರಣ್ಯಗಳಲ್ಲಿ ಅಪರಿಚಿತವಾಗಿ ಉಳಿದಿರುವ ಅದೆಷ್ಟೋ ಔಷದಿಯ ಗುಣವುಳ್ಳ ಸಸ್ಯ ಸಂಪತ್ತನ್ನು ಸಂಶೋಧಿಸಲು ಪ್ರೇರಣೆ ನೀಡುತ್ತದೆ. ಉದಾರೀಕರಣದ ಕಹಿಯನ್ನು ಅನುಭವಿಸುತ್ತಿರುವ ಪ್ರಸ್ತುತದಲ್ಲಿ, ಅಮೂರ್ತವಾಗಿ ಅರಣ್ಯದಲ್ಲಿ ಅಡಗಿರುವ ಸಂಪತ್ತನ್ನು ಭೇದಿಸಬೇಕು ಎನ್ನುವಲ್ಲಿ ತೇಜಸ್ವಿಯವರ ಬರವಣಿಗೆಯ ಮಹತ್ವ ಅರಿವಾಗುತ್ತದೆ.

ವಿಸ್ಮಯಪೂರಿತ ವಿನೋದ ಬರವಣಿಗೆಯ ಶೈಲಿ, ವಸ್ತು ವಿಷಯಗಳನ್ನು ಪರಿಣಾಮಕಾರಿಯಾಗಿ ನಿರೂಪಿಸಿದೆ. ಸಮಚಿತ್ತದ ಪ್ರಾಕೃತಿಕ ಬರವಣಿಗೆ ಭಾವತಿರೇಕದಲ್ಲಿ ತೊಯ್ದು ಹೋಗದೆ, ಅಂತಿಮವಾಗಿ ಮಾನವೀಕರಣದ ನೆಲೆಗೆ ಹೊರಳುತ್ತದೆ. ಪುಷ್ಟಿಗೊಂಡ ಬೌದ್ಧಿಕ ಆಯಾಮಗಳಿಂದ ಕ್ಷುದ್ರ ಜೀವಿಗಳು ಎಂದು ಸಮಾಜದಿಂದ ಪರಿಗಣಿಸಲ್ಪಟ್ಟ ಅಂಶಗಳು ಚೈತನ್ಯದ ಪ್ರತೀಕಗಳಾಗಿ ಜೀವನೋತ್ಸಾಹದಿಂದ ಅರಳಿ ನಿಲ್ಲುವುದು ತೇಜಸ್ವಿಯವರು ಕಂಡುಕೊಂಡ ಪ್ರಾಕೃತಿಕ ದರ್ಶನದಿಂದ. ವೈಚಾರಿಕತೆ ಎಂಬುದು ಹೇರಿಕೆಯಾಗದೆ ಪ್ರಬಂಧಗಳ ಒಡಲಿನಲ್ಲಿ ಹರಿದು ಸರಳ ಮತ್ತು ಆಪ್ತತೆಯ ರೀತಿಯಲ್ಲಿ ವ್ಯಕ್ತ ಗೊಂಡಿರುವುದು ಪ್ರಯೋಗಶೀಲತೆಗೆ ಸಾಕ್ಷಿಯಾಗಿದೆ. "ತೇಜಸ್ವಿ ಯವರ ಸಾಹಿತ್ಯ ಅವರು ಬದುಕಿದ ಪರಿಸರದಿಂದ ಎಷ್ಟು ಪ್ರಭಾವಿತವಾಗಿದೆ ಎಂದರೆ 'ಕರ್ವಾಲೋ' ಕಾದಂಬರಿಯ ಪಾತ್ರಗಳಾದ ಎಂಗ್ಟ ಮತ್ತು ಕರಿಯಪ್ಪ ನಿಜ ಜೀವನದಲ್ಲಿ ಲೇಖಕನನ್ನು ಸಂಧಿಸಿ ಆತನನ್ನು 'ಇಚಾರಣೆಗೆ' ಗುರಿಪಡಿಸುತ್ತವೆ. ಅವರ ನಾಯಿ 'ಕಿವಿ' ಕನ್ನಡ ಸಾಹಿತ್ಯದ ಅಮಾನವ ಪಾತ್ರವಾಗಿಬಿಟ್ಟಿದೆ. ಕುಕ್ಕುಟ ಪಿಶಾಚದ ನಿಗೂಢತೆ, ಮಾರದ ತೋಟದ ಸಬ್ ಕಾಂಟ್ರಾಕ್ಟನ್ನು ಚೌಡಿಗೆ ವಹಿಸಿಕೊಟ್ಟು ತನ್ನ ಕೆಲಸವನ್ನು ಹಗುರ ಗೊಳಿಸಿಕೊಂಡದ್ದು. ವಿಚಿತ್ರ ರಕ್ಷಣಾ ತಂತ್ರಗಳನ್ನು ಅಳವಡಿಸಿಕೊಂಡು ಬುದ್ಧಿವಂತ ಮನುಷ್ಯರನ್ನೇ ತಬ್ಬಿಬ್ಬುಗೊಳಿಸಲುವ ಕಪ್ಪೆ, ಆಮೆಗಳು, ಕದ ತಟ್ಟಿ ದೆವ್ವವೆಂದು ಹೆದರಿಸಿದ ಮಡಿವಾಳ ಹಕ್ಕಿ ಇವುಗಳ ಕತೆಯನ್ನೆಲ್ಲ ಓದಿಯೇ ಸವಿಯಬೇಕು. ಕನ್ನಡ ಗದ್ಯ ಸಾಹಿತ್ಯಕ್ಕೆ 'ಪರಿಸರದ ಕತೆ' ಬಹು ದೊಡ್ಡ

[೭] ಕೃಷ್ಣ ಮೂರ್ತಿ ಹನೂರು, ತೇಜಸ್ವಿ ಸಾಹಿತ್ಯ ಕೃಷಿ, ಪುಟ ೫೬
[೮] ಟಿ.ಪಿ. ಅಶೋಕ, ತೇಜಸ್ವ ಕಥನ, ಪುಟ ೧೦೬


© Copyright @ Authors

ಕೊಡುಗೆ"[೯] ಎಂಬ ಅಭಿಪ್ರಾಯ ಕೃತಿಯ ಸತ್ವವನ್ನು ಸೂಚಿಸುತ್ತದೆ. ತೇಜಸ್ವಿಯವರ ಸಮಗ್ರ ಸಾಹಿತ್ಯದ ಅಧ್ಯಯನ ಹೊಸ ಜೀವನ ದೃಷ್ಟಿಯ ಸೂಚನೆಗಳನ್ನು ನೀಡುತ್ತದೆ. ಕುವೆಂಪು ಅವರ 'ಮಲೆನಾಡಿನ ಚಿತ್ರಗಳು' ಪ್ರಕೃತಿಯ ರಸ ಚೈತನ್ಯದ ರೋಮಾಂಚನ ಸೌಂದರ್ಯವನ್ನು ತೆರೆದಿಟ್ಟರೆ, 'ಪರಿಸರದ ಕತೆ' ಅದರ ಮತ್ತೊಂದು ಮುಖವನ್ನು ಆಡಂಬರವಿಲ್ಲದೆ ತೆರೆದಿಡುತ್ತದೆ.

**ಪರಾಮರ್ಶನ ಗ್ರಂಥಗಳು**

1. ಕೆ.ಪಿ ಪೂರ್ಣಚಂದ್ರ ತೇಜಸ್ವಿ, ಪರಿಸರದ ಕಥೆ, ಪುಸ್ತಕ ಪ್ರಕಾಶನ, ಸರಸ್ವತಿಪುರಂ, ಮೈಸೂರು, ೨೦೦೪
2. ಕುವೆಂಪು, ಮಲೆನಾಡಿನ ಚಿತ್ರಗಳು, ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು ೨೦೦೪
3. ಪೂರ್ಣಚಂದ್ರ ತೇಜಸ್ವಿ, ಡಾ. ಎಚ್.ಎಂ ಮಹೇಶ್ವರಯ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು ೨೦೦೨
4. ಡಾ. ಕರೀಗೌಡ ಬೀಚನಹಳ್ಳಿ, ಶತಮಾನದ ಸಣ್ಣ ಕಥೆಗಳ ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೨೦೦೩
5. ಪ್ರೊ .ಜಿ.ಟಿ. ವೀರಪ್ಪ, ಡಾ.ಎಂ. ಬೈರೇಗೌಡ (ಸಂ) ತೇಜಸ್ವಿ, ಸಾಹಿತ್ಯ ಕೃಷಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೨೦೦೪
6. ಟಿ.ಪಿ. ಅಶೋಕ, ತೇಜಸ್ವಿ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೨೦೦೪

[೯] ಟಿ.ಪಿ. ಅಶೋಕ, ತೇಜಸ್ವಿ ಕಥನ, ಪುಟ ೧೧೧


**© Copyright @ Authors**